Sri H. R. KESHAVA MURTHY.—In view of the prevailing distress conditions, will the Government make up its mind to review the work of the Distress Relief Committee which is in distress.

Sri M. V. KRISHNAPPA.—There was a Committee headed by the Chief Minister some time back to secure some funds to use it for relief works in the affected areas by natural or unnatural calamities and things like that. There is nothing like distress relief fund. There is fund collected for relieving the affected area for which the Chief Minister is the Chairman and there are some members of this House. Mr. Lakkappa is also one of the Members.

Sri K. LAKKAPPA.—Rules have been framed to provide relief to the people who have been caused damage on account of such natural calamities. Is it not a fact that the Hon'ble Minister has referred that matter to that Committee ?

Sri M V. KRISHNAPPA.—If the rules are there, they will be published in the Gazette.

ಶ್ರೀ ಬಿ. ಚೆನ್ನಬೈರೇಗೌಡ.—ಪಂಜಾಬಿನಲ್ಲಿ 3 ಜನ ಕಾಂಗ್ರೆಸ್‌ನವರನ್ನು ಸುಟ್ಟುಹಾಕಿದಾಗ, ಸರ್ಕಾರದವರು 5 ಸಾವಿರ ರೂಪಾಯಿಗಳನ್ನು ಪರಿಹಾರ ಕೊಟ್ಟಿದ್ದು ತಮಗೆ ಗೊತ್ತಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪೇಪರಿನಲ್ಲಿ ಓದಿದ್ದೀರೆಂದು ಕಾಣುತ್ತದೆ. ಪಂಜಾಬಿನವರಾಗಲಿ, ಇನ್ನೊಂದು ದೇಶದವರಾಗಲಿ, ಅಲ್ಲಿಯ ಸರ್ಕಾರ ಏನಾದರೂ ತೀರ್ಮಾನ ಮಾಡುವುದಕ್ಕೆ ಕಾನೂನು ಇದ್ದೇ ಇರುತ್ತದೆ. ಕಾಂಗ್ರೆಸ್‌ನವರು ಸಾಯಲಿ, ಸ್ವತಂತ್ರದವರು ಸಾಯಲಿ, ಪಿ.ಎಸ್.ಪಿ.ಯವರು ಸಾಯಲಿ, ಅದು ಅನ್‌ನ್ಯಾಚ್ಯುರಲ್ ಆಗಿ, ಆದರಿಂದ ಯಾರಿಗಾದರೂ ತೊಂದರೆಯಾಗಿದ್ದರೆ, ಯಾವ ಪಕ್ಷದವರೇ ಆಗಲಿ, ಪರಿಹಾರ ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಫ್ಲಡ್ ಮೊದಲಾದ ಅಪಘಾತಗಳಿಂದ ಉಂಟಾದ ನಷ್ಟಕ್ಕೆ ಪರಿಹಾರ ಕೊಡಲಿಕ್ಕೆ ಅವಕಾಶವಿಲ್ಲವೆಂದು ಹೇಳಿದಿರಿ, ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಪರಿಹಾರ ಕೊಡುವಂತಹ ವಿಚಾರ ಯಾವ ಕಾನೂನಿನಲ್ಲೂ ಇಲ್ಲವೆಂದು ಹೇಳಿದಿರಿ, ಅದಕ್ಕಾಗಿ ಒಂದು ಕಾನೂನನ್ನು ಮಾಡಲಿಕ್ಕೆ ಯೋಚಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆ ಮಲೆನಾಡಿನಲ್ಲಿ ಫ್ಲಡ್ಸ್ ಬಂದು ಬಹಳ ತೊಂದರೆಯಾದಾಗ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಲೋನ್ಸ್ ಮೂಲಕ ಕೊಟ್ಟರು. ಅಂತಹ ವಿಶೇಷ ಸಂದರ್ಭದಲ್ಲಿ ಸರ್ಕಾರ ಮುಂದೆ ಬಂದು ಜನಗಳಿಗೆ ಸಹಾಯ ಮಾಡಬೇಕಾದ್ದು ಧರ್ಮ ಮತ್ತು ಕರ್ತವ್ಯ. ಕಾನೂನು ಅಡ್ಡಿ ಇದೆ, ಕಾನೂನು ಇಲ್ಲ, ಸಹಾಯ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದು ತಪ್ಪು. ಸೌತ್ ಕೆನರಾ ಮತ್ತು ನಾರ್ತ್‌ಕೆನರಾದಲ್ಲಿ ನಡೆದಿರುವುದು ನ್ಯಾಚುರಲ್ ಕೆಲಾಮಿಟಿ. ದೊಡ್ಡ ಪ್ರಮಾಣದಲ್ಲಿ ನಡೆದಿದೆ. ಪೂರ್ತಿ ನಷ್ಟದ ರಿಪೋರ್ಟನ್ನು ತರಿಸಿಕೊಂಡು, ಇನ್ನೂ ಹೆಚ್ಚು ಸಹಾಯ ಮಾಡುವುದಕ್ಕೆ ಅವಶ್ಯಕತೆ ಇದ್ದರೆ ಸರ್ಕಾರದವರು ಸರ್ವ ಪ್ರಯತ್ನ ಮಾಡುತ್ತಾರೆ.

Target of agricultural production during III Five Year Plan.

Q.*—255. **Sri H. R. KESHAVA MURTHY (Gandasi).—

Will the Government be pleased to state :—

(*a*) the target of agricultural production of the State during III Five Year Plan period ;

(*b*) the achievement during the same period ;

(*c*) the reasons for the shortfall, if any ?

A.—Sri H. C. BORAIAH (Parliamentary Secretary to the Minister for Agriculture).—

(a)	Food Grains	...	2,25,49,888 tons.
	Cotton	...	26.28 lakh bales.
	Sugarcane	...	21.82 (Gur)lakh tonnes.
	Oil seeds	...	34.93 lakh tonnes.
(b)	Food Grains	...	2,12,57,337 tons.
	Cotton	...	22.41 lakh bales.
	Sugarcane	...	28.73 lakh tonnes (Gur)
	Oil seeds	...	33.59 lakh tonnes.

(c) 1 *Food Grains.*—Short supply of fertilisers and adverse seasonal conditions.

2 *Cotton* :—Adverse seasonal conditions both in Rabi and Khariff tracts. Cultivators preferred to grow food crops instead of cotton wherever irrigable facilities were available.

Sri H. R. KESHAVA MURTHY.—What is the requirement of the State during the third five year plan period ?

Sri H. C. BORAIAH.—10·02 lakhs tons.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಉತ್ತರದಲ್ಲಿ ಫುಡ್‌ಗ್ರೈನ್ಸ್ ಎಂದು ಕೊಟ್ಟಿದ್ದೀರಿ. ಅದರಲ್ಲಿ ಸೀರಿಯಲ್ ಎಷ್ಟು? ನಾನ್ ಸೀರಿಯಲ್ ಎಷ್ಟು? Production requirements of the State during the same period ಎಷ್ಟು ಎಂದು ತಿಳಿಸಿ.

ಶ್ರೀ ಎಚ್. ಸಿ. ಬೋರಯ್ಯ.—ಫುಡ್‌ಗ್ರೈನ್ಸ್‌ನಲ್ಲಿ ಸೀರಿಯಲ್ಸ್ ಸೇರಿ ಹೋಗಿದೆ. ಬ್ರೇಕ್ ಅಪ್ ಕೊಡುವುದಕ್ಕೆ ನನ್ನಲ್ಲಿ ವಿವರಗಳು ಇಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ತಾವು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೀರಿ. ಅದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ. ರೈತರು ಎಷ್ಟು ಎಕರೆ ಜಮೀನಿನಲ್ಲಿ ಎಷ್ಟು ಆಹಾರಧಾನ್ಯಗಳನ್ನು ಬೆಳೆಯಬೇಕು, ಎಷ್ಟು ಎಕರೆಯಲ್ಲಿ ಎಣ್ಣೆಕಾಳು, ಹತ್ತಿ ಮುಂತಾದವನ್ನು ಬೆಳೆಯಬೇಕು ಎಂದು ಆದೇಶ ಕೊಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಒಂದು ಯೋಜನೆಯನ್ನು ಹಾಕಿಕೊಂಡು ಆ ಪ್ರಕಾರವಾಗಿ ಕೆಲಸ ಮಾಡುತ್ತಾ ಹೋಗುವುದರಿಂದ ಆ ಯೋಜನೆಯ ಪ್ರಕಾರ ಎಷ್ಟು ಉತ್ಪತ್ತಿ ಆಗಿರಬಹುದು ಎಂದು ಸರ್ವೆಸಾಧಾರಣವಾಗಿ ಸರ್ಕಾರದ ಸೋರ್ಸ್ಸ್ ಮೂಲಕ ಅಸೆಸ್ ಮಾಡುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—'ಸಿ'ಗೆ ಉತ್ತರವಾಗಿ Short supply of fertilisers and adverse seasonal conditions ಎಂದು ಕೊಟ್ಟಿದ್ದೀರಿ, short supply of fertilisersಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—Fertilisers ಕೊರತೆ ಇದೆ. ಕೊರತೆ ಇರುವುದನ್ನು ನೋಡಿಕೊಂಡು, ಅಷ್ಟನ್ನು ಕೊಡಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳುತ್ತೇವೆ. ಆದರೆ ನಾವು ಕೇಳಿದಷ್ಟು ಅವರು ಕೊಡುವುದಿಲ್ಲ. ಅವರು ಕೊಟ್ಟಿದ್ದನ್ನು ನಾವು ರೈತರಿಗೆ ಹಂಚುತ್ತೇವೆ. ಆ ಬಗ್ಗೆ ಕೊರತೆ ಏಕೆ ಇದೆ ಎಂಬುದು ತಮಗೆಲ್ಲಾ ಸ್ಪಷ್ಟವಾಗಿ ಗೊತ್ತಿದೆ.

ಶ್ರೀ ಬಿ. ಎಲ್. ಗೌಡ.—ಈ ಆಹಾರದ ಗುರಿಯನ್ನು ಮುಟ್ಟಬೇಕಾದರೆ ತಮಗೆ ಎಷ್ಟು ಫರ್ಟಿಲೈಜರ್ಸ್ ಬೇಕಾಗಿತ್ತು ? ಎಷ್ಟು ಕಡಮೆ ಸರಬರಾಜು ಆಗಿತ್ತು ಎಂಬುದನ್ನು ತಿಳಿಸಬೇಕು ?

ಶ್ರೀ ಎಚ್. ಸಿ. ಬೋರಯ್ಯ.—ಬಹುಶಃ ತುಂಬ ವಿವರವಾಗುತ್ತದೆ. ಬೇರೆ ಪ್ರಶ್ನೆ ಕೇಳಿದರೆ ಕೊರತೆಗೆ ಕಾರಣವೇನು ಎಂದು ವಿಶದವಾಗಿ ಹೇಳಬಹುದು.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಾನು ಕೇಳಿದ್ದು requirement of the State during third five year plan. ತಾವು 10 ಲಕ್ಷ ಎಂದು ಹೇಳಿದಿರಿ. ತಮ್ಮ ಟಾರ್ಜಟ್ ಎಷ್ಟು ? ಡಿಫಿಸಿಟ್ ಎಷ್ಟು ಬರುತ್ತದೆ ? State requirement ಜಾಸ್ತಿ ಇರಬೇಕಾಗಿತ್ತು. ಆದ್ದರಿಂದ ಸರಿಯಾದ ಉತ್ತರವನ್ನು ಕೊಡಿ. ಇಲ್ಲದಿದ್ದರೆ ಗೊತ್ತಿಲ್ಲವೆಂದು ಹೇಳಿ.

ಶ್ರೀ ಎಚ್. ಸಿ. ಬೋರಯ್ಯ.—ಎರಡನೆ ಯೋಜನೆಯ ಕೊನೆಗೆ 38·50 ಟನ್ಸ್ ಇರಬೇಕಾಗಿತ್ತು. 1961-62ರಲ್ಲಿ 2,13,520 ಟನ್ಸ್‌ನ್ನು ಟಾರ್ಜಟ್ ಇಟ್ಟುಕೊಂಡಿದ್ದೆವು. ಅಚೀವ್‌ಮೆಂಟ್ 60,600 ಟನ್ಸ್. ಲೆವಲ್ ಆಫ್ ಪ್ರೊಡಕ್ಷನ್ 39,10,600 ಟನ್ ಆಗುತ್ತದೆ. 1965—66ರಲ್ಲಿ 2,51,751 ಟನ್ಸ್‌ನ್ನು ನಾವು ಟಾರ್ಜೆಟ್ ಇಟ್ಟುಕೊಂಡಿದ್ದೆವು. ಅಚೀವ್‌ಮೆಂಟ್ ಆಗಿರುವುದು 1,98,000 ಟನ್ಸ್. ಲೆವಲ್ ಆಫ್ ಪ್ರೊಡಕ್ಷನ್ 46,38,683 ಟನ್ಸ್ ಆಗುತ್ತದೆ. ವರ್ಷ ವರ್ಷ ರಿಕ್ವೈರ್‌ಮೆಂಟ್ ಅಧಿಕವಾಗುತ್ತಿರುತ್ತದೆ. 10 ಲಕ್ಷ ಟನ್ಸ್ ಅಡಿಷನಲ್ ಬೀಳುತ್ತದೆ. 38,50,000 ಟನ್ಸ್ ಜೊತೆಗೆ 10.02 ಲಕ್ಷ ಟನ್ ಬೇಕಾಗುತ್ತದೆ.

9-00 A.M.

Sri H. R. KESHAVA MURTHY.—There is a difference between production target and actual production. ಪ್ರೊಡಕ್ಷನ್ ಎಷ್ಟು? ಟಾರ್ಜೆಟ್ ಎಷ್ಟು?

ಶ್ರೀ ಹೆಚ್. ಸಿ. ಬೋರಯ್ಯ.—ಅಡಿಷನಲ್ ರಿಕ್ವೈರ್‌ಮೆಂಟ್ 10 ಲಕ್ಷ ಟನ್ನುಗಳು. 38·50 ಲಕ್ಷ ಟನ್ ಬೇಸ್ ಇಟ್ಟುಕೊಂಡು, ಅದರ ಮೇಲೆ ಅಡಿಷನಲ್ ಆಗಿ ಬೇಕಾಗಿರುವುದು 10·02 ಲಕ್ಷ ಟನ್. ಒಟ್ಟು 48·52 ಲಕ್ಷ ಟನ್ ಬೇಕಾಗುತ್ತದೆ.

Sri S. SIVAPPA.—According to the figures given, the total shortage during the Third Five Year plan is nearly 13 lakhs of tons. To make up this deficit of 13 lakh tons, may I know how many lakhs of tons of foodgrains were imported by Government?

ಶ್ರೀ ಹೆಚ್. ಸಿ. ಬೋರಯ್ಯ.—ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ ವರ್ಷವೂ ಆಹಾರಧಾನ್ಯ ಕಡಿಮೆ ಬೀಳತಕ್ಕ ಪರಿಸ್ಥಿತಿ ನೋಡುತ್ತಾ ಇದ್ದೇವೆ. ಹೆಚ್ಚಿನದಾಗಿ ಬೆಳೆಯುವುದಕ್ಕೆ ಏನೇನು ಕಾರ್ಯಕ್ರಮ ಕೈಕೊಂಡಿದ್ದೀರಿ?

ಶ್ರೀ ಹೆಚ್. ಸಿ. ಬೋರಯ್ಯ.—ನಾವು ಕೈಗೊಂಡಿರತಕ್ಕ ಕಾರ್ಯಕ್ರಮಗಳು ಬಹಳ ಇವೆ. ಒಂದೆರಡು ಅಲ್ಲ. ಅವೆಲ್ಲಾ ಹೇಳಬೇಕು ಎಂದರೆ ಟೈಂತೆಗೆದುಕೊಳ್ಳುತ್ತದೆ. ಪ್ರತ್ಯೇಕ ಪ್ರಶ್ನೆ ಹಾಕಿದರೆ ಹೇಳಬಹುದು. ಹಾಗೆ ಹೇಳುವುದಾದರೆ ತಮಗೆ ಗೊತ್ತಿದೆ—ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟ್‌ನ ಕಾರ್ಯಕ್ರಮಗಳನ್ನು ತೆಗೆದುಕೊಂಡು ನೋಡುವುದಾದರೆ ಎಲ್ಲಾ ವಿವರಗಳನ್ನು ವಿಶದವಾಗಿ ಕೊಟ್ಟಿದ್ದೇವೆ. ಅದೇ ಪ್ರಕಾರ ಸ್ಕೀಂಗಳನ್ನು ಇಂಪ್ಲಿಮೆಂಟ್ ಮಾಡುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಹಾಗಾದರೆ ಏತಕ್ಕೆ ಸಾಕಷ್ಟು ಬೆಳೆದಿಲ್ಲ?

ಶ್ರೀ ಹೆಚ್. ಬೋರಯ್ಯ.—ಮುಖ್ಯವಾಗಿ ಆಗಿರತಕ್ಕ ಕೊರತೆ ಋತುಮಾನಗಳ ವೈಪರೀತ್ಯ ಮತ್ತು ಫರ್ಟಿಲೈಸರ್ಸ್ ಕೊರತೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಂಕಿಅಂಶಗಳನ್ನು ಶೇಖರಿಸಲು ಚಾವಡಿ ಲೆಕ್ಕದ ಜೊತೆಗೆ ಇನ್ನು ಯಾವುದಾದರೂ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಹೆಚ್. ಸಿ. ಬೋರಯ್ಯ.—ನಮಗೆ ಸೊಗಸಾದ ಅಂಕಿಅಂಶಗಳನ್ನು ಶೇಖರಿಸುವ ಇಲಾಖೆ ಇದೆ. ಅಂಕಿ ಅಂಶಗಳನ್ನು ಸಂಗ್ರಹಿಸತಕ್ಕ ಮಾರ್ಗಗಳು ಇವೆ. ಆ ಮಾರ್ಗಗಳಿಂದ ತರಿಸಿಕೊಂಡಿರತಕ್ಕ ಅಂಶಗಳು ಇವು.

Sri H. R. KESHAVA MURTHY.—At least will you give us important features of the agricultural production programme during the 4th plan to attain self-sufficiency in food?

ಶ್ರೀ ಹೆಚ್. ಸಿ. ಬೋರಯ್ಯ.—ಪ್ರತ್ಯೇಕ ಪ್ರಶ್ನೆ ಹಾಕೋಣವಾಗಲಿ, ವಿವರಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಋತುಮಾನಗಳ ವೈಪರೀತ್ಯ ಮತ್ತು ಗೊಬ್ಬರದ ಕೊರತೆಯಿಂದ ನಿಮ್ಮ ಗುರಿಯನ್ನು ಸಾಧನೆ ಮಾಡುವುದಕ್ಕಾಗಲಿಲ್ಲ ಎಂದು ಹೇಳಿದ್ದೀರಿ. ಇವೆರಡನ್ನೂ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಅಂದರೇ—ಮಳೆ ಹುಯ್ಯಿಸುವುದಕ್ಕೆ ಮತ್ತು ಗೊಬ್ಬರ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್. ಸಿ. ಬೋರಯ್ಯ.—ಮುಂದೆ ಏನು ಮಾಡುತ್ತೇವೆ ಎನ್ನುವ ಬಗ್ಗೆ ನಾಲ್ಕನೇ ಪಂಚವಾರ್ಷಿಕ ಯೋಜನೆಯ ವಿವರಗಳು ಬೇಕಾದರೆ ಪ್ರತ್ಯೇಕ ಪ್ರಶ್ನೆ ಹಾಕೋಣವಾಗಲಿ. ಆಗ ಕೈಗೊಳ್ಳತಕ್ಕ ಯೋಜನೆಗಳನ್ನೆಲ್ಲಾ ವಿವರವಾಗಿ ತಮ್ಮ ಮುಂದೆ ಮಂಡಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಆಹಾರಧಾನ್ಯದ ಕೊರತೆ ಇದೆಯೆಂದು ಹೇಳಿದ್ದೀರಿ. ಆಹಾರಧಾನ್ಯದ ಕೊರತೆ ಇರುವುದರಿಂದ ರೈತರು ಎಣ್ಣೆಕಾಳು, ಹತ್ತಿಕಾಳು ಹಾಕದೆ ಆಹಾರಧಾನ್ಯ ಬೆಳೆಯುವ ದೆಶೆಯಿಂದ ರೈತರಿಗೆ ಪ್ರೋತ್ಸಾಹ ಕೊಡುವ ಸಲುವಾಗಿ, ಪರಿಹಾರ ಅಥವಾ ಸಬ್‌ಸಿಡಿ ಕೊಡುವ ಯೋಚನೆ ಮಾಡಿದ್ದೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ಸಬ್‌ಸಿಡಿ ಕೊಡತಕ್ಕ ಯೋಚನೆ ಇಟ್ಟುಕೊಂಡಿಲ್ಲ. ಬೇರೆ ಬೇರೆ ರೀತಿಯಲ್ಲಿ ರೈತನಿಗೆ ಸಹಾಯ ಒದಗಿಸುತ್ತೇವೆ. ಉತ್ತಮವಾದ ಬೀಜಗಳನ್ನು, ಹಾಗೂ ಸುಧಾರಿತ ವ್ಯವಸಾಯದ ಉಪಕರಣಗಳನ್ನೂ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಡುವುದಲ್ಲದೆ ಸಸಿ ಸಂರಕ್ಷಣೆ ಬಗ್ಗೆ ಸಹಕಾರಿಯಾಗತಕ್ಕ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಹೀಗೆ ನಾನಾ ರೀತಿಯಲ್ಲಿ ಸಹಾಯವನ್ನು ಸರ್ಕಾರದವರು ರೈತರಿಗೆ ಒದಗಿಸುತ್ತಾರೆ. ಅವುಗಳ ಉಪಯೋಗ ಗಳನ್ನು ಪಡೆದುಕೊಂಡು ರೈತರು ಹೆಚ್ಚಿನ ಉತ್ಪತ್ತಿ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಪ್ರಕೃತ ಆಹಾರಧಾನ್ಯಗಳ ಕೊರತೆಯನ್ನು ಯಾವಾಗ ತುಂಬ ಬಹುದು ?

ಶ್ರೀ ಹೆಚ್. ಸಿ. ಬೋರಯ್ಯ.—ಅದು ಏನಾಗಿದೆ ಎಂದರೆ, ಯೋಜನೆಗಳನ್ನು ಹಾಕುತ್ತಾ ಹೋಗುತ್ತೇವೆ. ಅವುಗಳನ್ನು ಕಾರ್ಯಗತ ಮಾಡುತ್ತೇವೆ. ಆದರೆ ಅದೇ ಕಾಲದಲ್ಲಿ ಜನಸಂಖ್ಯೆಯೂ ಕೂಡ ಹೆಚ್ಚುತ್ತಾ ಹೋಗುತ್ತದೆ. ನಾವು ಏನೇ ಯೋಜನೆಗಳನ್ನು ಕೈಗೊಂಡರೂ ಋತುಮಾನಗಳ ವೈಪರೀತ್ಯದಿಂದಲೂ ಬಹಳ ತೊಂದರೆಯಾಗುತ್ತದೆ. ರೈತ ಬಾಂಧವರು ಕೆಲಸ ಮಾಡಬೇಕಾಗು ತ್ತದೆ. ಹೀಗೆ ಅನೇಕ ಫ್ಯಾಕ್ಟರ್ಸ್ ಮೇಲೆ ಅವಲಂಬಿಸಿರುತ್ತದೆ. ಒಂದೇ ಮಾರ್ಗವನ್ನು ಅವಲಂಬಿ ಸಿರುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಯೋಜನೆಗಳಿಂದ ಜನ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಯಾವಾಗ ಕೊರತೆ ತುಂಬಬಹುದು ?

ಶ್ರೀ ಹೆಚ್. ಸಿ. ಬೋರಯ್ಯ.—ಯೋಜನೆಗಳಿಂದ ಹೊಟ್ಟೆಗೆ ಇಲ್ಲದೆ ಜನ ಯಾರೂ ಸಾಯುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕೃತಕ ಗೊಬ್ಬರದ ಕೊರತೆ ಇರುವುದರಿಂದ ಆಹಾರಧಾನ್ಯ ಗಳನ್ನು ಬೆಳೆಯುವುದಕ್ಕೆ ತೊಂದರೆಯಾಗುತ್ತಿದೆ, ಎಂದು ಹೇಳಿದಿರಿ. ಸ್ವಾಭಾವಿಕವಾಗಿ ಮಲ ಮೂತ್ರಗಳು, ದನದ ಗಂಜಲ, ಇವುಗಳ ಶೇಖರಣೆಗೆ ವ್ಯವಸ್ಥೆ ಮಾಡಿದ್ದೀರಾ ? ಅಂತಹ ಶೇಖರಣೆ ಯಿಂದ ನಮ್ಮ ಸಂಸ್ಥಾನಕ್ಕೆ ಗೊಬ್ಬರವನ್ನು ಶೇಕಡಾ ಎಷ್ಟು ಒದಗಿಸುತ್ತಾ ಇದ್ದೀರಿ ?

ಶ್ರೀ ಹೆಚ್. ಸಿ. ಬೋರಯ್ಯ.—ಇದಕ್ಕೆ ಒಂದು ಯೋಜನೆ ಹಾಕಿಕೊಂಡಿದ್ದೇವೆ. ಮಲಮೂತ್ರ ಗಳನ್ನು ಮತ್ತು ಹಸಿರು ಎಲೆಗಳನ್ನು ಸಂಗ್ರಹಿಸಿ ಕಾಂಪೋಸ್ಟ್ ಗೊಬ್ಬರವನ್ನು ತಯಾರು ಮಾಡುವುದಕ್ಕೆ ಕಾಂಪೋಸ್ಟ್ ಸ್ಕೀಂ ಒಂದು ಇದೆ. ಅದಕ್ಕೆ ಹಣವನ್ನು ಹೆಚ್ಚು ಹೆಚ್ಚಾಗಿ ಒದಗಿಸಿದೆ. ಆ ಪ್ರಕಾರ ಕೆಲಸಕಾರ್ಯಗಳು ನಡೆದುಕೊಂಡು ಬರುತ್ತಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆ ರೀತಿ ಎಷ್ಟು ಟನ್ಸ್ ಗೊಬ್ಬರ ತಯಾರು ಮಾಡಿದ್ದೀರಿ ?

ශ್ರೀ ಹೆಚ್. ಸಿ. ಬೋರಯ್ಯ.—ವಿವರಗಳು ಬೇಕಾದರೆ ಪ್ರತ್ಯೇಕ ಪ್ರಶ್ನೆ ಹಾಕಬೇಕು.

Pay Scales of Lecturers and Professors working in Polytechnics.

*Q.—577. Sri S. RUDRAPPA (Kalgi).—

Will the Government be pleased to state :—

(a) whether it is a fact that All India Council of Technical Education have made recommendations regarding pay-scales of Lecturers and Professors working in the Polytechnics in the State ;

(b) if so, the action taken or proposed to be taken in this behalf ?

A.—Sri S. R. KANTHI (Minister for Education).—

(a) Yes.

(b) Orders sanctioning higher scales of pay have been issued.